ಬೆಳಗ್ಗೆ ನಾಲ್ಕು ಗಂಟೆಗೆ ಇವರು ಹೂವು ಮಾರುತ್ತಿದ್ದ ಜಾಗದ ಹಿಂದೆ ಇರುವ ಗ್ರಂಥಿಗೆ ಅಂಗಡಿ ಬೀಗ ತೆರೆಯಿತು. ತೆರೆದವರು ಬಾಲ ಮತ್ತು ಅವನ ತಂದೆ. ಬಾಲ ಚಂಪಾಳಿಗಿಂತ ಮೂರು ವರ್ಷ ದೊಡ್ಡವನು. ಇಬ್ಬರದೂ ಸರಿ ಸುಮಾರು ಒಂದೇ ಬಣ್ಣ. ಉದ್ದುದ್ದ ಪ್ಲಾಸ್ಟಿಕ್ ಚೀಲಗಳನ್ನ ಮೇಲಕ್ಕೆ ನೇತುಹಾಕಿ, ವೀಳ್ಯದೆಲೆಯ ಬುಟ್ಟಿ ಓರಣವಾಗಿ ಇಟ್ಟು, ಅದರ ಪಕ್ಕದಲ್ಲಿ ಅರಿಸಿನ, ಮೂರ್ನಾಲ್ಕು ತರಹದ ಕುಂಕುಮ, ಅಡಿಕೆ ಮತ್ತು ಬೇರೆಲ್ಲ ಸಾಮಾನುಗಳನ್ನು ಜೋಡಿಸಿದ. ಬಳಿಕ ಬಾಲನ ಅಪ್ಪ ಜೋರಾಗಿ, 'ಏಯ್ ಸುಂದರಿ, ಹೂವ ಕೊಡು, ಪಟಕ್ಕೆ ಇಡಬೇಕು' ಎಂದು ಆತ್ಮೀಯವಾಗಿ ಕೂಗಿದ. ಅದಕ್ಕಾಗೇ ಕಾದಿದ್ದ ಚಂಪಾ, ತನ್ನ ಕೈಯಿಂದ ಎರಡು ಮೊಳ ಅಳೆದು ಬಾಲನಿಗೆ ಕೊಡುವಾಗ ಇಬ್ಬರ ಕೈಯಿಗೂ ಬೆಚ್ಚನೆಯ ಸ್ಪರ್ಶದ ರೋಮಾಂಚನ. ಇಬ್ಬರ ಕಣ್ಣುಗಳು ಸೇರಿದಾಗ ಸಣ್ಣ ಮಿಂಚು ಹೊಳೆದದ್ದು ಅವರಿಬ್ಬರ ಹೊರತಾಗಿ ಬೇರಾರಿಗೂ ಕಾಣಿಸಲಿಲ್ಲ.

ಬಾಲನ ಹೆಸರು ಬಾಲಾಜಿ. ಅವನ ತಾತನ ಕಾಲದಿಂದಲೂ ಇದೇ ಗ್ರಂಥಿಗೆ ಅಂಗಡಿ ವ್ಯಾಪಾರ ಒಲಿದು ಬಂದಿತ್ತು. ಬಾಲ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹಲವಾರು ಬಾರಿ ಮಿಂದು ಎದ್ದಿದ್ದ. ಒಂದೆರಡು ಸಬ್ಜೆಕ್ಟ್ ಪಾಚಿಯಂತೆ ಅಂಟಿಕೊಂಡೇ ಇರುತ್ತಿತ್ತು. ಅದನ್ನು ತೊಳೆದುಕೊಳ್ಳುವ ಆಸಕ್ತಿ ಅವನಲ್ಲಿ ಯಾವತ್ತೋ ಬತ್ತಿಹೋಗಿತ್ತು. ಸದಾ ಸ್ವಪ್ನಲೋಕದಲ್ಲೇ ತೇಲುತ್ತಿದ್ದ ಬಾಲ ಅವರಪ್ಪ ಹೇಳುತ್ತಿದ್ದ ಕೆಲಸಗಳಲ್ಲಿ ಎಡವಿದ್ದೇ ಹೆಚ್ಚು. ಅಪ್ಪ ಮಗನಿಗೆ ಅಪ್ರಯೋಜಕ ಅನ್ನೋ ಲೇಬಲ್ ಹಣೆಗೆ ಅಂಟಿಸಿಬಿಟ್ಟಿದ್ದ. ಬಾಲ ವ್ಯಾಪಾರದಲ್ಲಿ ಚುರುಕಿದ್ದರೂ ಅಪ್ಪನಿಗೆ ಸಮಾಧಾನವಿಲ್ಲ. ತನ್ನದೇ ಸ್ವಂತ ಗ್ರಂಥಿಗೆ ಅಂಗಡಿ ಹಾಕಿಕೊಳ್ಳಬೇಕು ಅನ್ನುವ ಆಸೆ. ಪ್ರತಿ ಏರಿಯಾದಲ್ಲೊಂದು 'ಬಾಲಾಜಿ ಭಕ್ತಿ ಭಂಡಾರ್' ತೆರೆಯಬೇಕು ಅನ್ನುವ ಕನಸು. ಅವರಪ್ಪನಿಗೆ ತನ್ನ ಲ್ಯಾಪ್‌ಟಾಪ್‌ನಲ್ಲಿ ಒಂದು ಪ್ರೆಸೆಂಟೇಷನ್ ಮಾಡಿ ತೋರಿಸಿದ್ದ. ಅದಕ್ಕೆ ಬಂಡವಾಳವಾಗಲಿ ಉತ್ತೇಜನವಾಗಲಿ ಅವರಪ್ಪನಿಂದ ಸಿಗಲಿಲ್ಲ. ಹತ್ತನೇ ಕ್ಲಾಸ್ ಪಾಸ್ ಮಾಡೋಕೆ ಆಗೋಲ್ಲ, ಇವನನ್ನ ನೆಚ್ಚಿಕೊಂಡು ಲಕ್ಷ ಲಕ್ಷ ಬಂಡವಾಳ ಸುರೀಬೇಕಾ? ಒಂದು ಹತ್ತು ವರ್ಷ ಈ ಅಂಗಡಿಲಿ ವ್ಯಾಪಾರ ಮಾಡು, ಆಮೇಲೆ ನೋಡೋಣ ಎಂದಿದ್ದ. ಎದೆಗೆ ಚುಚ್ಚಿದ ತಂದೆಯ ತಾತ್ಸಾರದ ಮುಳ್ಳು ಅವನಲ್ಲಿ ಹೊಸ ಕಿಚ್ಚನ್ನು ಎಬ್ಬಿಸಿತ್ತು. ಬಾಲಾಜಿ ಭಕ್ತಿ ಭಂಡಾರ್ ಎನ್ನುವ ಕಿಚ್ಚು. 'ತಾತನಿಂದ ಬಂದ ಅಂಗಡಿ ಅದನ್ನೇ ನಡೆಸಿಕೊಂಡು ಬಂದಿದ್ದಾನೆ ಅಪ್ಪ, ಸ್ವಂತವಾಗಿ ಏನೂ ಮಾಡಿಲ್ಲ, ತನಗೂ ಮಾಡೋಕೆ ಬಿಡಲ್ಲ' ಎಂದು ಗೊಣಗಿಕೊಳ್ಳುತ್ತಾ ದಿನಾಲೂ ಅಂಗಡಿಗೆ ಅಪ್ಪನ ಒತ್ತಾಯಕ್ಕೆ ಬರುತ್ತಿದ್ದ. ಜೊತೆಗೆ, ಚಂಪಾಳ ಕೆನ್ನೆ ಗುಳಿಯ ಆಕರ್ಷಣೆ ಬೇರೆ.

ಸುಮಾರು ಏಳು ಏಳೂವರೆಗೆ ಹೂವೆಲ್ಲ ಸಾಕಷ್ಟು ಖಾಲಿಯಾಗಿತ್ತು. ಅವಳಮ್ಮ ಸರಾಸರಿ ನೂರಾ ಇಪ್ಪತ್ತಕ್ಕೆ ಮತ್ತು ಚಂಪಾ ನೂರಕ್ಕೆ ಮಾರಿದ್ದರು. ಗಂಡನಿಗೆ ಲೆಕ್ಕ ಹೇಳುವಾಗ ಎಂದಿನಂತೆ ಇಪ್ಪತ್ತೋ ಮೂವತ್ತೋ ಕಡಿಮೆ ಹೇಳುತ್ತಿದ್ದುದು. ಹಾಗೆ ಉಳಿಸಿದ ಹಣದಿಂದಲೇ ಅವಳ ಕತ್ತಿಗೆ ಮೂರು ಚಿನ್ನದ ಸರಪಳಿಗಳು ಸೇರಿಕೊಂಡಿದ್ದವು. ಈಗ ಚಂಪಾಳಿಗೆ ತನ್ನ ಹಾಗೆ ಕೈಯಿಗೆ, ಕತ್ತಿಗೆ ಮಾಡಿಸಬೇಕು, ಹೇಗಾದರೂ ಈ ಮಾರ್ಕೆಟ್, ಈ ಹೂವು ಇದೆಲ್ಲದನ್ನು ಮೀರಿದ ಒಂದು ಒಳ್ಳೆ ಮನೆ ಸೇರಿಸಬೇಕು. ಅವಳ ಅದೃಷ್ಟ ಚೆನ್ನಾಗಿದ್ದು, ಗಂಡ ಮುಂದೆ ಓದಿಸಲು ಒಪ್ಪಿದರೆ ಓದಲಿ ಅನ್ನುವ ಆಸೆ. ಅವಳಾದರೂ ರಾತ್ರಿ ಒಳ್ಳೆಯ ನಿದ್ದೆ ಮಾಡುವಂತಾಗಬೇಕು ಎನ್ನುವ ಬಯಕೆ. ಅದಕ್ಕೆಂದೇ ಅವಳು ತನ್ನ ತಮ್ಮನ ಮಗನ ಸಂಬಂಧವನ್ನು ತಳ್ಳಿಹಾಕಿದ್ದು. ಅವಳ ಗಂಡನ ಸಂಬಂಧಿಕರು ಒಂದಿಬ್ಬರು ಇವಳನ್ನು ಕೇಳಿಕೊಂಡು ಬಂದಿದ್ದರು. ಅನುಕೂಲಸ್ಥರೇ ಆದರೂ ಅವರ ಮನಃಸ್ಥಿತಿ ತನ್ನ ಗಂಡನಿಗಿಂತ ಭಿನ್ನವಾಗಿಲ್ಲ ಎಂದು ಅರಿತು ಇವಳೇ ಕುಂಟು ನೆಪ ಹೇಳಿ ಒಪ್ಪಿಕೊಂಡಿರಲಿಲ್ಲ. ಅದು ಮಗಳಿಗೂ ಸಮಾಧಾನ ಕೊಟ್ಟಿತ್ತು.